ಸಿ.ಸಿ .ನಂ. 191/2022 ಪಿಡಬ್ಲೂಃ 1

ದಿನಾಂಕಃ 09-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

10. ನಮ್ಮ ಬ್ಯಾಂಕಿನಲ್ಲಿ ಬಡ್ಡಿ ಹಾಗೂ ದಂಡದ ಬಡ್ಡಿ ಆಕರಣೆ ಮಾಡುತ್ತೇವೆ . ಅದನ್ನು ಹೊರತು ಪಡಿಸಿ ಬೇರೆ ಯಾವುದೇ ಬಡ್ಡಿಯನ್ನು ಆಕರಣೆ ಮಾಡುವುದಿಲ್ಲ . ನಿಪಿ-11 ನ್ನು ಬರೆಯುವಾಗ ತಿದ್ದುಪಡಿಗಳು ಇರಲಿಲ್ಲ. ಯಾವುದೇ ತಿದ್ದುಪಡಿ ಆದರೆ ಯಾರು ತಿದ್ದುಪಡಿ ಮಾಡಿರುತ್ತಾರೆ ಅಥವಾ ಬರೆದು ಕೊಡುವವರು ಅವರ ಚೋಟಾ ಸಹಿ ಹಾಕಬೇಕಾಗುತ್ತದೆ ಎಂದರೆ ಸರಿ . ಹೆಬ್ಬೆಟ್ಟಿನ ಗುರುತನ್ನು ಹಾಕಿದಾಗ ದಾಖಲೆಯನ್ನು ಪಡೆಯುವ ವ್ಯಕ್ತಿ ಆ ಹೆಬ್ಬೆಟ್ಟಿನ ಗುರುತು ಯಾರದು ಎಂದು ಬರೆಯಬೇಕಾಗುತ್ತದೆ ಎಂದರೆ ಸರಿ . ನಿಪಿ-7 ರಲ್ಲಿ ಹಲವಾರು ತಿದ್ದುಪಡಿಗಳಿವೆ ಎಂದರೆ ಸಾಕ್ಷಿ ಬರವಣಿಗೆ ಮಾಡುವಾಗ ತಪ್ಪಾಗಿರಬಹುದು ಎಂದು ನುಡಿದಿರುತ್ತಾರೆ. ಆರೋಪಿಯ ವಿದ್ಯಾಭ್ಯಾಸದ ಬಗ್ಗೆ ಹಾಗೂ ಅವರಿಗೆ ಯಾವ ಯಾವ ಭಾಷೆ ಬರೆಯಲು ಬರುತ್ತದೆ ಮಾಹಿತಿ ಇಲ್ಲ . ಚೆಕ್ ನಲ್ಲಿ ಬರೆದಿರುವ ಪವಿತ್ರಾ ನಾಗರಾಜ ತಾಂಡೇಲ ಹಾಗೂ ಸಹಿ ಹಾಗೂ ಇತರೇ ಬರವಣಿಗೆ ಬೇರೆ ಬೇರೆ ಬರೆದಿರುವುದು ಹಾಗೂ ಬೇರೆ ಬೇರೆ ಇಂಕುಗಳಲ್ಲಿ ಬರೆಯಲಾಗಿದೆ ಎಂದರೆ ಗೊತ್ತಾಗುವುದಿಲ್ಲ . ಚೆಕ್ ನಲ್ಲಿರುವ ಎಲ್ಲಾ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ . ಪವಿತ್ರಾ ನಾಗರಾಜ ತಾಂಡೇಲ ಎಂದು ಬರೆದಿರುವ ಸಹಿ ಆರೋಪಿ ಹಾಕಿರುತ್ತಾರೆ. ನಾವು ಹಾಜರು ಪಡಿಸಿದ ಯಾವುದೇ ದಾಖಲಾತಿಗಳಲ್ಲಿ ಪವಿತ್ರಾ ನಾಗರಾಜ ತಾಂಡೇಲ ಎಂಬುವ ಸಹಿ ಇಲ್ಲ ಎಂದರೆ ಸಾಕ್ಷಿ ಚೆಕ್ ನ ಮೇಲೆ ಪಿ ಎನ್ ಟಿ ಎಂದು ಕೂಡ ಇದೆ ಪವಿತ್ರಾ ನಾಗರಾಜ ತಾಂಡೇಲ ಎಂದು ಕೂಡ ಇದೆ ಎಂದು ನುಡಿದಿರುತ್ತಾರೆ . ಈ ಯಾವುದೇ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಅಂಚೆ ಸ್ವೀಕೃತಿ ಪತ್ರ ಹಾಗೂ ಇನ್ನಿತರ ದಾಖಲಾತಿಗಳಲ್ಲಿ ಪವಿತ್ರಾ ನಾಗರಾಜ ತಾಂಡೇಲ ಎಂದು ಬರೆದಿರುವ ಸಹಿ ಇಲ್ಲ ಎಂದರೆ ಸರಿ , ಆದರೆ ಪಿ ಎನ್ ಟಿ ಎಂದು ಸಹಿ ಹಾಕಿದ್ದಾರೆ ಎಂದು ನುಡಿದಿರುತ್ತಾರೆ. ಆರೋಪಿ ನನ್ನ ಮುಂದೆ ಯಾವುದೇ ದಾಖಲಾತಿಗೆ ಸಹಿ ಹಾಕಿಲ್ಲ , ನಾನು ಕೇಳಿ ತಿಳಿದುಕೊಂಡಿದ್ದೇನೆ. ಸುಳ್ಳು ಪ್ರಕರಣ ಸೃಷ್ಟಿ ಮಾಡಿದವರ ಬಳಿ ನಾನು ಕೇಳಿಕೊಂಡು ಸುಳ್ಳು

ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ . ಗಂಗೆಕೊಳ್ಳದಲ್ಲಿ ಪವಿತ್ರಾ ನಾಗರಾಜ ತಾಂಡೇಲ ಎಂದು ಹೇಳುವ ಎಷ್ಟು ವ್ಯಕ್ತಿಗಳು ಇದ್ದಾರೆ ಗೊತ್ತಿಲ್ಲ . ಅಂಚೆ ಸ್ವೀಕೃತಿ ಪತ್ರದಲ್ಲಿರುವ ಸಹಿ ಆರೋಪಿತಳದ್ದು ಅಲ್ಲ ಎಂದರೆ ಸರಿಯಲ್ಲ. ನಾವು ಕಳಿಸಿದ್ದೇವೆ ಎಂದು ಹೇಳುವ ನೋಟಿಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆಂತರಿಕ ಪತ್ರ ಎಂದು ಹೇಳುವ ದಾಖಲಾತಿಯಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವತ್ತೂ ನಮ್ಮ ಬ್ಯಾಂಕಿಗೆ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿಲ್ಲ ಹಾಗೂ ಸಾಲವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

11. ನಾಗರಾಜ ನಾಗಪ್ಪ ತಾಂಡೇಲ ಇವರು ನಮ್ಮ ಬ್ಯಾಂಕಿನಲ್ಲಿ ಎಷ್ಟು ಸಾಲ ಇತ್ತು ಮಾಹಿತಿ ಇಲ್ಲ . ನಾಗರಾಜ ನಾಗಪ್ಪ ತಾಂಡೇಲ ಇವರು ತಮ್ಮ ಸಾಲಕ್ಕೆ ಸಂಬಂಧಪಟ್ಟಂತೆ ನಮ್ಮ ಬ್ಯಾಂಕಿಗೆ ಬಂದಾಗ ಅಲ್ಲಿ ಹೇಗೋ ಸಿಕ್ಕಿದ ಚೆಕ್ ನ್ನು ನಾವು ದುರುಪಯೋಗ ಪಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಹಣವನ್ನು ಲಪಟಾಯಿಸುವ ಉದ್ದೇಶದಿಂದ ಚೆಕ್ ನಲ್ಲಿರುವ ಎಲ್ಲಾ ಬರವಣಿಗೆಯನ್ನು ನಾವೇ ಬರೆದಿದ್ದೇವೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಪ್ರಕರಣಕ್ಕೆ ತಕ್ಕಂತೆ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ . ನಾವು ಹೇಳಿದಂತೆ ಆರೋಪಿ ಯಾವುದೇ ಹಣವನ್ನು ನಮಗೆ ಕಾನೂನುಬದ್ಧವಾಗಿ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ . ಆರೋಪಿಯಿಂದ ಹಣ ಲಪಟಾಯಿಸಲು ದಾಖಲೆಗಳನ್ನು ಸೃಷ್ಟಿ ಮಾಡಿ ದಾಖಲಿಸಿದ ಸುಳ್ಳು ಕೇಸಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.